# ಕಾರ್ಯನಿರ್ವಾಹಕ ಸಾರಾಂಶ

## ಹಿನ್ನೆಲೆ

ಹನ್ನೊಂದನೇ ಹಣಕಾಸು ಆಯೋಗವು ನಿಗದಿಪಡಿಸಿದ ಹಣಕಾಸಿನ ತಿದ್ದುಪಡಿಯ ಪ್ರಮಿತಿಗಳನ್ನು ಆಧರಿಸಿ 2000–05ರ ಅವಧಿಗೆ ಮೊದಲ ಮಧ್ಯಮಾವಧಿಯ ಹಣಕಾಸಿನ ಯೋಜನೆಯನ್ನು ಜಾರಿಗೊಳಿಸುವ ಮೂಲಕ ಕರ್ನಾಟಕ ಸರ್ಕಾರವು ಹಣಕಾಸಿನ ಸುಧಾರಣೆಗಳು ಮತ್ತು ಬಲವರ್ಧನೆಗೆ ಆದ್ಯತೆ ನೀಡಿದೆ. ಮಧ್ಯಮಾವಧಿಯ ಹಣಕಾಸಿನ ಯೋಜನೆಯು ಆವರ್ತನ ವಾರ್ಷಿಕ ದಾಖಲೆಯಾಗಿ ಇದರಲ್ಲಿ ನಿಗದಿಪಡಿಸಲಾದ ವಿತ್ತೀಯ ಗುರಿಗಳು ಮತ್ತು ಕಾರ್ಯ ನೀತಿಗಳು ವಾರ್ಷಿಕ ಆಯವ್ಯಯ ತಯಾರಿಕೆಗೆ ಪೂರಕವಾಗಿದೆ. ಕರ್ನಾಟಕವು ವಿತ್ತೀಯ ಜವಾಬ್ದಾರಿ ಕಾಯಿದೆ ಯನ್ನು (ಸೆಪ್ಟೆಂಬರ್ 2002) ಜಾರಿಗೊಳಿಸಿದ ಮೊದಲ ರಾಜ್ಯವಾಗಿದ್ದು, ಮಧ್ಯಮಾವಧಿಯ ಹಣಕಾಸಿನ ಯೋಜನೆಗೆ ಶಾಸನಬದ್ಧ ಬೆಂಬಲವನ್ನುನೀಡಿದೆ. ಕರ್ನಾಟಕ ವಿತ್ತೀಯ ಜವಾಬ್ದಾರಿ ಕಾಯಿದೆಯು ರಾಜಸ್ವ ಹೆಚ್ಚಳವನ್ನು ಸಾಧಿಸುವುದು, ವಿತ್ತೀಯ ಕೊರತೆಯನ್ನು ಕಡಿಮೆ ಮಾಡುವುದು, ಹಣಕಾಸಿನ ನೀತಿಯ ಪರಿಣಾಮಕಾರಿ ನಿರ್ವಹಣೆಗೆ ಇರುವ ಅಡ್ಡಿಗಳನ್ನು ತೆಗೆದುಹಾಕುವುದರ ಮೂಲಕ ಸಾಮಾಜಿಕ ಮತ್ತು ಭೌತಿಕ ಮೂಲಸೌಕರ್ಯ ಮತ್ತು ಮಾನವ ಅಭಿವೃದ್ಧಿಯನ್ನು ಸುಧಾರಿಸುವ ವ್ಯಾಪ್ತಿಯನ್ನು ಹೆಚ್ಚಿಸುವುದು ಮತ್ತು ಸಾಲ ಮತ್ತು ಋಣ ಮತ್ತು ಕೊರತೆಗಳ ಮೇಲಿನ ಮಿತಿಗಳ ಮೂಲಕ ವಿವೇಚನಾಯುಕ್ತ ಋಣ ನಿರ್ವಹಣೆ, ಮಧ್ಯಂತರ ವಿತ್ತೀಯ ಪರಿಮಿತಿಗಳ ಬಳಕೆಯಿಂದ ಹಣಕಾಸು ನಿರ್ವಹಣೆಯಲ್ಲಿಹೆಚ್ಚಿನ ಪಾರದರ್ಶಕತೆಯನ್ನು ಸಾಧಿಸುವುದರ ಮುಖಾಂತರ ಹಣಕಾಸಿನ ಸ್ಥಿರತೆ ಮತ್ತು ಸಹಿಷ್ಣುತೆಯನ್ನು ಖಾತ್ರಿಪಡಿಸುವ ಗುರಿಯನ್ನು ಹೊಂದಿದೆ

## ವರದಿ

31 ಮಾರ್ಚ್ 2021ಕ್ಕೆ ಕೊನೆಗೊಂಡ ವರ್ಷಕ್ಕೆ ಕರ್ನಾಟಕ ಸರ್ಕಾರದ ಪರಿಶೋಧಿತ ಲೆಕ್ಕಗಳನ್ನು ಆಧರಿಸಿ, ಈ ವರದಿಯು ರಾಜ್ಯ ಸರ್ಕಾರದ ಹಣಕಾಸುಗಳ ವ್ಯವಹಾರದ ವಿಶ್ಲೇಷಣಾತ್ಮಕ ವಿಮರ್ಶೆಯನ್ನು ಒದಗಿಸುತ್ತದೆ. ವರದಿಯನ್ನು ನಾಲ್ಕು ಅಧ್ಯಾಯಗಳಲ್ಲಿ ರಚಿಸಲಾಗಿದೆ.

**ಅಧ್ಯಾಯ 1 – ಅವಲೋಕನ:** ಈ ಅಧ್ಯಾಯವು ವರದಿಯ ಆಧಾರ ಮತ್ತು ವಿಧಾನವನ್ನು ವಿವರಿಸುತ್ತದೆ ಮತ್ತು ಇದರಲ್ಲಿನ ದತ್ತಾಂಶವು, ಸರ್ಕಾರಿ ಲೆಕ್ಕಗಳ ರಚನೆ, ಆಯವ್ಯಯ ಪ್ರಕ್ರಿಯೆಗಳು, ಪ್ರಮುಖ ಸೂಚ್ಯಂಕಗಳ ಸಮಗ್ರ ಹಣಕಾಸು ವಿಶ್ಲೇಷಣೆ ಮತ್ತು ಕೊರತೆಗಳು / ಹೆಚ್ಚಳವೂ ಸೇರಿದಂತೆ ರಾಜ್ಯದ ಹಣಕಾಸಿನ ಸ್ಥಿತಿಯ ಅವಲೋಕನವನ್ನು ಒದಗಿಸುತ್ತದೆ.

**ಅಧ್ಯಾಯ 2 – ರಾಜ್ಯದ ಹಣಕಾಸು ವ್ಯವಹಾರಗಳು:** ಈ ಅಧ್ಯಾಯವು ರಾಜ್ಯದ ಹಣಕಾಸಿನ ವಿಶಾಲ ನೋಟದೊಂದಿಗೆ ರಾಜ್ಯದ ಹಣಕಾಸು ಲೆಕ್ಕಗಳನ್ನು ಆಧರಿಸಿ, ಹಿಂದಿನ ವರ್ಷಕ್ಕೆ ಸಂಬಂಧಿಸಿದಂತೆ ಪ್ರಮುಖ ಹಣಕಾಸಿನ ಒಟ್ಟುಗಳಲ್ಲಿನ ನಿರ್ಣಾಯಕ ಬದಲಾವಣೆಗಳನ್ನು, 2016–17ರಿಂದ 2020–21 ರವರೆಗಿನ ಅವಧಿಯಲ್ಲಿನ ಒಟ್ಟಾರೆ ಪ್ರವೃತ್ತಿಗಳು, ರಾಜ್ಯದ ಋಣ ಚಿತ್ರಣ ಮತ್ತು ಪ್ರಮುಖ ಸಾರ್ವಜನಿಕ ಲೆಕ್ಕ ವಹಿವಾಟುಗಳ ವಿಶ್ಲೇಷಣೆಯನ್ನು ಒದಗಿಸುತ್ತದೆ.

**ಅಧ್ಯಾಯ 3 – ಆಯವ್ಯಯ ನಿರ್ವಹಣೆ:** ಈ ಅಧ್ಯಾಯವು ರಾಜ್ಯದ ಧನ ವಿನಿಯೋಗ ಲೆಕ್ಕಗಳನ್ನು ಆಧರಿಸಿದೆ ಮತ್ತು ರಾಜ್ಯ ಸರ್ಕಾರದ ಹಣ ವಿನಿಯೋಗ ಮತ್ತು ಹಂಚಿಕೆಯ ಆದ್ಯತೆಗಳನ್ನು ಪರಿಶೀಲಿಸುತ್ತದೆ. ಇದು ಸಾಂವಿಧಾನಿಕ ನಿಬಂಧನೆಗಳಿಂದ ಆದ ವಿಚಲನಗಳನ್ನು ಕುರಿತು ವರದಿ

ಮಾಡುತ್ತದೆ ಮತ್ತು ಪಾರದರ್ಶಕತೆಯ ಮೇಲೆ ಪರಿಣಾಮ ಬೀರುವ ಅಂಶಗಳನ್ನು ಪ್ರಧಾನವಾಗಿ ತೋರಿಸುತ್ತದೆ.

ಅಧ್ಯಾಯ 4 – ಲೆಕ್ಕಗಳ ಗುಣಮಟ್ಟ ಮತ್ತು ಹಣಕಾಸು ವರದಿಯ ರೂಢಿಗಳು: ಈ ಅಧ್ಯಾಯವು ಪ್ರಸಕ್ತ ವರ್ಷದಲ್ಲಿ ವಿವಿಧ ಹಣಕಾಸು ನಿಯಮಗಳು, ಕಾರ್ಯವಿಧಾನಗಳು ಮತ್ತು ನಿರ್ದೇಶನಗಳೊಂದಿಗೆ ರಾಜ್ಯಸರ್ಕಾರದ ಇಲಾಖೆಗಳ ಅನುಸರಣೆಯ ಅವಲೋಕನ ಮತ್ತುಸ್ಥಿ ತಿಯನ್ನುಒದಗಿಸುತ್ತದೆ.

ವರದಿಯಲ್ಲಿನ ಅಭಿಪ್ರಾಯಗಳಿಗೆ ಸಮರ್ಥನೀಯವಾಗಿ ವಿವಿಧ ಮೂಲಗಳಿಂದ ಸಂಗ್ರಹಿಸಿದ ಹೆಚ್ಚುವರಿ ದತ್ತಾಂಶದ ಅನುಬಂಧಗಳನ್ನು ವರದಿಯು ಒಳಗೊಂಡಿದೆ. ಆಯ್ದಪದಗಳ ಪಾರಿಭಾಷಿಕ ಪಟ್ಟಿಯನ್ನು ವರದಿಯ ಕೊನೆಯಲ್ಲಿ ನೀಡಲಾಗಿದೆ.

## ಲೆಕ್ಕಪರಿಶೋಧನೆಯಲ್ಲಿನ ಅಂಶಗಳು

## ಹಣಕಾಸಿನ ಸ್ಥಿತಿ

ರಾಜ್ಯದ ಹಣಕಾಸಿನ ಸ್ಥಿತಿಯನ್ನು ಮೂರು ಪ್ರಮುಖ ಹಣಕಾಸಿನ ಪ್ರಮಿತಿಗಳ ಪರಿಭಾಷೆಯಲ್ಲಿ ನೋಡಲಾಗುತ್ತದೆ – ರಾಜಸ್ವ ಹೆಚ್ಚಳ/ ಕೊರತೆ, ವಿತ್ತೀಯ ಕೊರತೆ ಮತ್ತು ರಾಜ್ಯದ ಒಟ್ಟು ಆಂತರಿಕ ಉತ್ಪನ್ನ(ರಾಒಆಂಉ)ಕ್ಕೆ ಬಾಕಿ ಇರುವ ಸಾಲದ ಅನುಪಾತ.

2016–17 ರಿಂದ 2019–20ರ ಅವಧಿಯಲ್ಲಿ ರಾಜಸ್ವ ಹೆಚ್ಚಳವನ್ನುದಾಖಲಿಸಿದ್ದ ರಾಜ್ಯವು 2020–21ರಲ್ಲಿ ರಾಜಸ್ವ ಕೊರತೆಯನ್ನು ಕಂಡಿದೆ. ರಾಜಸ್ವ ಕೊರತೆಯು ₹19,338 ಕೋಟಿಗಳಷ್ಟಿತ್ತು. ಕಳೆದ ನಾಲ್ಕು ವರ್ಷಗಳಲ್ಲಿ ವಿತ್ತೀಯ ಕೊರತೆಯು ರಾಒಆಂಉ ದ ಶೇಕಡ ಮೂರಕ್ಕಿಂತ ಕಡಿಮೆ ಮತ್ತು 2020–21ರಲ್ಲಿ ಶೇಕಡ ಐದಕ್ಕಿಂತ (ಶೇ. 3.72) ಕಡಿಮೆ ಇಡುವಲ್ಲಿ ರಾಜ್ಯವು ಯಶಸ್ವಿಯಾಗಿದೆ.

ಈ ಅವಧಿಯಲ್ಲಿ, ರಾಜ್ಯದ ಬಾಕಿ ಇರುವ ಸಾಲವು (ಆಯವ್ಯಯದ ಹೊರಗಿನ ಸಾಲಗಳೂ ಸೇರಿದಂತೆ) ರಾಒಆಂಉ ದ ಶೇಕಡ 18.32 ಮತ್ತು 22.37 ನಡುವೆ ಉಳಿಯಿತು (2020–21ರ ಅವಧಿಯಲ್ಲಿ, ಋಣ–ರಾಒಆಂಉದ ಅನುಪಾತವನ್ನು ಲೆಕ್ಕ ಮಾಡಲು ಸರಕು ಮತ್ತು ಸೇವಾ ತೆರಿಗೆ ಪರಿಹಾರದ ಬದಲಿಗೆ ಪಡೆದ ಬ್ಯಾಕ್–ಟು–ಬ್ಯಾಕ್ ಸಾಲವನ್ನು ಪರಿಗಣಿಸಲಾಗಿಲ್ಲ), ಇದು ಕರ್ನಾಟಕವು ವಿತ್ತೀಯ ಜವಾಬ್ದಾರಿ ಕಾಯಿದೆ 2002ರಲ್ಲಿ ಸೂಚಿಸಲಾದ ರಾಒಆಂಉದ ಶೇಕಡ 25ಕ್ಕಿಂತ ಕಡಿಮೆಯಿದೆ.

(ಅಧ್ಯಾಯ 1)

## ರಾಜ್ಯದ ಹಣಕಾಸು ವ್ಯವಹಾರ

ಹಿಂದಿನ ವರ್ಷಕ್ಕೆ ಹೋಲಿಸಿದರೆ 2020–21ರಲ್ಲಿ ರಾಜ್ಯ ಸರ್ಕಾರವು ತನ್ನ ರಾಜಸ್ವ ಸ್ವೀಕೃತಿಯಲ್ಲಿ ಶೇಕಡ 10.67ರಷ್ಟು ಇಳಿಕೆ ಯನ್ನು ದಾಖಲಿಸಿದೆ.

ರಾಒಆಂಉಕ್ಕೆ ರಾಜ್ಯದ ತೆರಿಗೆ ಆದಾಯದ ಅನುಪಾತವು 2016–17 ರಲ್ಲಿದ್ದ 6.87ರಿಂದ 2020–21 ರಲ್ಲಿ 5.38ಕ್ಕೆ ಇಳಿದಿದೆ. ಸ್ವಂತ ತೆರಿಗೆ ಆದಾಯವು ರಾಜಸ್ವ ಸ್ವೀಕೃತಿಗಳ ಪ್ರಮುಖ ಭಾಗದ (ಶೇಕಡ 62) ಕೊಡುಗೆ ನೀಡಿದೆ. ರಾಜಸ್ವ ಸ್ವೀಕೃತಿಗಳಿಗೆ ತೆರಿಗೆಯೇತರ ಆದಾಯದ ಅನುಪಾತವು 2016–17 ರಲ್ಲಿದ್ದ ಶೇಕಡ 4.35ರಿಂದ 2020–21ರಲ್ಲಿ ಶೇಕಡ 5.04ಕ್ಕೆ ಏರಿದೆ. ರಾಒಆಂಉಕ್ಕೆ ಅದರ ಅನುಪಾತವು ಅತ್ಯಲ್ಪವಾಗಿದೆ (2020–21ರಲ್ಲಿ ಶೇಕಡ 0.44 ). ಇದು ತೆರಿಗೆಯೇತರ ಆದಾಯ ಸಂಗ್ರಹವನ್ನು ಸಜ್ಜುಗೊಳಿಸುವ ಅಗತ್ಯವನ್ನು ಸೂಚಿಸುತ್ತದೆ. 2020–21ರಲ್ಲಿ ಹಿಂದಿನ ವರ್ಷಕ್ಕೆ ಹೋಲಿಸಿದರೆ, ಕೇಂದ್ರ ತೆರಿಗೆಗಳು ಮತ್ತು ಸುಂಕಗಳಲ್ಲಿನ ರಾಜ್ಯದ ಪಾಲು ಮತ್ತು ಭಾರತ ಸರ್ಕಾರದಿಂದ ಸಹಾಯಾನುದಾನವು ಕ್ರಮವಾಗಿ ಶೇಕಡ 29.84 ಮತ್ತು ಶೇಕಡ 12.77ರಷ್ಟು ಕಡಿಮೆಯಾಗಿದೆ.

## ರಾಜಸ್ವ ವೆಚ್ಚ

ಹಿಂದಿನ ವರ್ಷಕ್ಕೆ (ಶೇಕಡ 38) ಹೋಲಿಸಿದರೆ 2020–21ರಲ್ಲಿ ಸಮಾಜ ಸೇವೆಗಳ ವಿಭಾಗದಡಿಯ ವೆಚ್ಚದಪಾಲು (ಶೇಕಡ 35) ಕಡಿಮೆಯಾಗಿದೆ. ಆದಾಗ್ಯೂ, 2020–21ರಲ್ಲಿ ಸಾಮಾನ್ಯ ಸೇವೆಗಳ ವಿಭಾಗದಡಿಯ ಪಾಲು ಪ್ರತಿಶತ 28ರಿಂದ31 ಕ್ಕೆ ಏರಿತು. ಶೇಕಡ 85ರಷ್ಟು ರಾಜಸ್ವ ವೆಚ್ಚವು ಸಂಬಳ, ಸ್ಥಳೀಯ ಸಂಸ್ಥೆಗಳಿಗೆ ಹಂಚಿಕೆಗಳು, ಬಡ್ಡಿಪಾವತಿಗಳು, ಪಿಂಚಣಿಗಳು, ಸಬ್ಸಿಡಿಗಳು, ಆಡಳಿತಾತ್ಮಕ ವೆಚ್ಚಗಳು, ಸಹಾಯಾನುದಾನ ಮತ್ತು ಹಣಕಾಸಿನ ನೆರವಿನ ಮೇಲಿನ ಬದ್ಧ ವೆಚ್ಚವನ್ನು ಒಳಗೊಂಡಿದೆ. ಸಹಾಯಾನುದಾನಗಳು ರಾಜಸ್ವ ಸ್ವೀಕೃತಿಗಳ ಶೇಕಡಾವಾರು 10ರಿಂದ (2019–20) 12ಕ್ಕೆ (2020–21) ಏರಿಕೆಯಾಗಿದೆ.

## ವೆಚ್ಚದ ಗುಣಮಟ್ಟ

ಹಿಂದಿನ ವರ್ಷಕ್ಕೆ ಹೋಲಿಸಿದರೆ (ಶೇಕಡ 18.52) 2020–21ರ ವರ್ಷದಲ್ಲಿ ಒಟ್ಟು ವೆಚ್ಚಕ್ಕೆ ಬಂಡವಾಳ ವೆಚ್ಚದ ಪಾಲು (ಸಾಲಗಳು ಮತ್ತು ಮುಂಗಡಗಳು ಸೇರಿದಂತೆ) (ಶೇಕಡ 21.45) 2.93ರಷ್ಟು ಹೆಚ್ಚಾಗಿದೆ. ಕಂಪನಿಗಳು/ನಿಗಮಗಳಲ್ಲಿ, 31 ಮಾರ್ಚ್ 2021ರಲ್ಲಿದ್ದಂತೆ ಹೂಡಿಕೆಯಿಂದ ಬಂದ ಲಾಭವು ಅತ್ಯಲ್ಪವಾಗಿದೆ (₹80.70 ಕೋಟಿ). ಹೂಡಿಕೆಗಳು ನಷ್ಟದಲ್ಲಿರುವ ಕಂಪನಿಗಳು/ನಿಗಮಗಳಲ್ಲಿ ಹೂಡಿದ ₹42,119.95 ಕೋಟಿಗಳನ್ನು (ಶೇಕಡ 62) ಒಳಗೊಂಡಿತ್ತು.

## ನಿಧಿಗಳು ಮತ್ತು ಇತರ ಹೊಣೆಗಾರಿಕೆಗಳು

ಪ್ರಸಕ್ತ ವರ್ಷದಲ್ಲಿ ಹಸಿರು ತೆರಿಗೆ ಉಪಕರ ₹10.86 ಕೋಟಿಗಳು ಮತ್ತು ರಸ್ತೆ ಸುರಕ್ಷತಾ ಉಪಕರ ₹10.92 ಕೋಟಿಗಳನ್ನು ಕ್ರಮವಾಗಿ ಹಸಿರು ತೆರಿಗೆ ನಿಧಿ ಮತ್ತು ರಸ್ತೆ ಸುರಕ್ಷತಾ ಉಪಕರ ನಿಧಿಗೆ ವರ್ಗಾಯಿಸಲಾಗಿಲ್ಲ. ಆಯವ್ಯಯ ಅಂದಾಜಿನಲ್ಲಿ ₹50 ಕೋಟಿಗಳನ್ನು ಮೀಸಲಿಟ್ಟಿದ್ದರೂ ಯಾವುದೇ ವೆಚ್ಚ ಮಾಡಿಲ್ಲ. ಆದ್ದರಿಂದ ಖಾತರಿ ವಿಮೋಚನಾ ನಿಧಿಯನ್ನು ಪುನಶ್ಚೇತನಗೊಳಿಸಲಾಗಿಲ್ಲ.

## ಋಣ ಸಹಿಷ್ಣುತೆ

ಮುಕ್ತ ಮಾರುಕಟ್ಟೆ ಸಾಲಗಳು ರಾಜ್ಯದ ಒಟ್ಟು ಹಣಕಾಸಿನ ಹೊಣೆಗಾರಿಕೆಗಳಲ್ಲಿ (ಆಯವ್ಯಯದ ಹೊರಗಿನ ಸಾಲಗಳೂ ಸೇರಿದಂತೆ) ಪ್ರಮುಖ ಪಾಲನ್ನು (ಶೇಕಡ 63) ಹೊಂದಿದ್ದವು. ಹಿಂದಿನ ವರ್ಷಕ್ಕೆ ಹೋಲಿಸಿದರೆ 2020–21ರಲ್ಲಿ ರಾಜ್ಯಕ್ಕೆ ಲಭ್ಯವಿರುವ ನಿವ್ವಳ ಋಣವು (₹41,946 ಕೋಟಿಗಳು) 4.14 ಪ್ರತಿಶತದಷ್ಟು ಹೆಚ್ಚಾಗಿದೆ. ಬಡ್ಡಿಪಾವತಿಯ ಹೊರೆ ಹೆಚ್ಚುತ್ತಿರುವ ಪ್ರವೃತ್ತಿಯಲ್ಲಿದೆ ಮತ್ತು ರಾಜಸ್ವ ಸ್ವೀಕೃತಿಗಳಿಗೆ ಬಡ್ಡಿಪಾವತಿಯ ಅನುಪಾತವು 2020–21 ರಲ್ಲಿ ಅತ್ಯಧಿಕವಾಗಿದ್ದು 14.95 ರಷ್ಟಿದೆ.

## ನಗದು ಶಿಲ್ಕುಗಳು

ಹೆಚ್ಚುವರಿ ಮಾರುಕಟ್ಟೆಯ ಸಾಲಗಳ ಕಾರಣದಿಂದಾಗಿ ವರ್ಷದ ಅಂತ್ಯದಲ್ಲಿ ರಾಜ್ಯದ ನಗದು ಶಿಲ್ಕು (ಭಾರತೀಯ ರಿಸರ್ವ್ ಬ್ಯಾಂಕಿನಲ್ಲಿ ಮೀಸಲಿಟ್ಟ ನಿಧಿಗಳು ಮತ್ತು ಠೇವಣಿಗಳ ಹೂಡಿಕೆ ಸೇರಿದಂತೆ) ಹಿಂದಿನ ವರ್ಷಕ್ಕಿಂತ ಪ್ರತಿಶತ 37ರಷ್ಟು ಹೆಚ್ಚಾಗಿದೆ.

(ಅಧ್ಯಾಯ 2)

## ಆಯವ್ಯಯ ನಿರ್ವಹಣೆ

2020–21ರಲ್ಲಿ ಒದಗಿಸಿದ್ದ ಒಟ್ಟು ₹2,65,220.73 ಕೋಟಿಗಳಿಗೆ ಪ್ರತಿಯಾಗಿ, ವೆಚ್ಚವು ₹2,42,694.49 ಕೋಟಿಗಳಾಗಿದ್ದು ಪರಿಣಾಮವಾಗಿ ₹22,526.24 ಕೋಟಿಗಳು (ಶೇಕಡ 8.49) ವೆಚ್ಚವಾಗದೆ ಉಳಿದಿದೆ..

ಪ್ರಸಕ್ತ ವರ್ಷದಲ್ಲಿ, ಶೇಕಡ 80 ರಷ್ಟು ಉಳಿತಾಯವನ್ನು ಅಧ್ಯರ್ಪಣೆ ಮಾಡಿಲ್ಲ. ಉಳಿತಾಯದ ಶೇಕಡ 80 ರಷ್ಟಕ್ಕೆ ಹಾಗೂ ಹಂಚಿಕೆ ಮತ್ತು ವೆಚ್ಚಗಳ ನಡುವಿನ ವ್ಯತ್ಯಾಸಗಳಿಗೆ ನಿಯಂತ್ರಣಾಧಿಕಾರಿಗಳು ಪ್ರಧಾನ ಮಹಾಲೇಖಾಪಾಲ (ಲೆಕ್ಕ ಮತ್ತು ಹಕ್ಕುದಾರಿ)ರಿಗೆ ವಿವರಣೆಯನ್ನು ಸಲ್ಲಿಸಿಲ್ಲ.

ಹತ್ತು ಅನುದಾನಗಳ ಅಡಿಯಲ್ಲಿ, ₹5,281.70 ಕೋಟಿಗಳ ಹೆಚ್ಚುವರಿ ವೆಚ್ಚಕ್ಕಾಗಿ ಶಾಸಕಾಂಗದ ಅನುಮೋದನೆಯಿಲ್ಲದೆ 36 ಕಾರ್ಯಕಾರಿ ಆದೇಶಗಳನ್ನು ಹೊರಡಿಸಲಾಗಿತ್ತು. ಈ ಕಾರ್ಯಕಾರಿ ಆದೇಶಗಳನ್ನು ನಂತರ ಪೂರಕ ಬೇಡಿಕೆಗಳ ಮೂಲಕ ಕ್ರಮಬದ್ಧಗೊಳಿಸಲಾಯಿತು. 2018–19 ರಿಂದ 2020–21ರ ಅವಧಿಯಲ್ಲಿ ಕಾರ್ಯನಿರ್ವಾಹಕ ಆದೇಶಗಳ ಮೂಲಕ ಹೆಚ್ಚುವರಿ ಮೊತ್ತವನ್ನು ಬಿಡುಗಡೆ ಮಾಡಿದ ಪ್ರಕರಣಗಳ ಸಂಖ್ಯೆಯು ಕಡಿಮೆಯಾಗಿರುವ ಪ್ರವೃತ್ತಿಯನ್ನು ತೋರಿಸಿದೆಯಾದರೂ, ಹಿಂದಿನ ವರ್ಷಕ್ಕೆ ಹೋಲಿಸಿದರೆ ಆದೇಶಗಳ ಮೊತ್ತವು 2020–21 ರಲ್ಲಿ ಹೆಚ್ಚಾಗಿದೆ.

ಸರ್ಕಾರದ ಮಹತ್ವದ ನೀತಿ ಉಪಕ್ರಮಗಳಾದ ವಿಜ್ಞಾನ ಮತ್ತು ಪ್ರತಿಭಾ ಶೋಧ ಕಾರ್ಯಕ್ರಮಗಳು, ಕೃತಕ ಬುದ್ಧಿಮತ್ತೆ ಸಂಶೋಧನೆ ಅನುವಾದ ಪಾರ್ಕ್, ನೀರಿನ ಶೇಖರಣೆಗಾಗಿ ಟ್ಯಾಂಕ್ ಬ್ಯಾಂಕ್, ಮಣ್ಣಿನ ಸ್ವಾಸ್ಥ್ಯ ನೀತಿ ಇತ್ಯಾದಿಗಳಿಗೆ ಹಣ ಬಿಡುಗಡೆ ಮಾಡದಿರುವುದು ಮತ್ತು ಸ್ವೀಕೃತಿಯಲ್ಲಿ ವಿಳಂಬವಾದ ಕಾರಣಗಳಿಂದಾಗಿ ಪ್ರಸಕ್ತ ವರ್ಷದಲ್ಲಿ ನೆರವೇರಲಿಲ್ಲ.

43 ಪ್ರಕರಣಗಳಲ್ಲಿ ಪೂರಕ ಅಂದಾಜುಗಳ ಮೂಲಕ ಪಡೆದ ₹391.79 ಕೋಟಿಗಳ ಹೆಚ್ಚುವರಿ ಅವಕಾಶವು ಅನಗತ್ಯವಾಗಿತ್ತು ಮತ್ತು 24 ಪ್ರಕರಣಗಳಲ್ಲಿ ಪಡೆದ ₹1,403.28 ಕೋಟಿಗಳು ಅಗತ್ಯಕ್ಕಿಂತ ಅಧಿಕವಾಗಿತ್ತು.

51 ಪ್ರಕರಣಗಳಲ್ಲಿ ಅವಕಾಶದ ಪುನರ್ವಿನಿಯೋಗವನ್ನು ಅನುಚಿತವಾಗಿ ಮಾಡಲಾಗಿದೆ, ಇದರ ಪರಿಣಾಮವಾಗಿ ಅವಕಾಶವು ಬಳಕೆಯಾಗದೆ ಉಳಿದಿರುವುದು ಅಥವ ಅವಕಾಶಕ್ಕಿಂತ ಹೆಚ್ಚಿನ ವೆಚ್ಚವಾಗಿದೆ.

2020–21ರಲ್ಲಿ ಆಯವ್ಯಯ ಅವಕಾಶಕ್ಕಿಂತ ಅಧಿಕ ವೆಚ್ಚವಾದ ₹415.90 ಕೋಟಿಗಳ (ಅನುದಾನ 14ರ ಅಡಿಯಲ್ಲಿ ₹402.60 ಕೋಟಿ ಮತ್ತು ಅನುದಾನ 24ರ ಅಡಿಯಲ್ಲಿ ₹13.30 ಕೋಟಿ) ಮೊತ್ತವು ಸಂವಿಧಾನದ 205ನೇ ಅನುಚ್ಛೇದದಡಿ ಸಕ್ರಮೀಕರಣಗೊಳಿಸಬೇಕಿದೆ. ಅಲ್ಲದೆ 2012–13 ರಿಂದ 2017–18 ರ ಅವಧಿಗೆ ಸಂಬಂಧಿಸಿದಂತೆ ಆಯವ್ಯಯವನ್ನು ಮೀರಿದ ₹2,409.53 ಕೋಟಿಗಳ ವೆಚ್ಚವನ್ನೂ ಸಂವಿಧಾನದ 205ನೇ ವಿಧಿಯ ಅಡಿಯಲ್ಲಿ ಕ್ರಮಬದ್ಧಗೊಳಿಸಬೇಕಾಗಿದೆ.

ವಿತ್ತೀಯ ಸೂಚಕವಾದ ರಾಜಸ್ವ ಕೊರತೆಯ ಮೇಲೆ ಪರಿಣಾಮ ಬೀರುವ ರಾಜಸ್ವ/ಬಂಡವಾಳ ವಿಭಾಗಗಳ ಅಡಿಯಲ್ಲಿ ₹217.02 ಕೋಟಿಗಳ ಮೊತ್ತವನ್ನು ತಪ್ಪಾಗಿ ವರ್ಗೀಕರಿಸಲಾಗಿದೆ.

(ಅಧ್ಯಾಯ –3)

## ಲೆಕ್ಕಗಳ ಗುಣಮಟ್ಟ ಮತ್ತು ಹಣಕಾಸು ವರದಿಯಲ್ಲಿನ ರೂಢಿಗಳು

2020–21ರಲ್ಲಿ, ಬಾಕಿ ಉಳಿದಿರುವ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಸಂಖ್ಯೆಯು ಹಿಂದಿನ ವರ್ಷಗಳಿಗೆ ಹೋಲಿಸಿದರೆ ಶೇಕಡಾ 13 ರಷ್ಟು ಹೆಚ್ಚಾಗಿದೆ. ಮೊತ್ತದ ಲೆಕ್ಕದಲ್ಲಿ ಇದು 31 ಪ್ರತಿಶತದಷ್ಟು ಹೆಚ್ಚಾಗಿದೆ. 2020–21ರಲ್ಲಿ ಸೆಳೆದ 2,247 ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಪೈಕಿ 662 ಬಿಲ್‌ಗಳು (ಶೇಕಡ 29) ಎನ್‌ಡಿಸಿ ಬಿಲ್‌ಗಳ ಕೊರತೆಯಿಂದ ಬಾಕಿ ಉಳಿದಿವೆ.

₹25 ಲಕ್ಷ ಅಥವಾ ಅದಕ್ಕಿಂತ ಹೆಚ್ಚಿನ ಅನುದಾನವನ್ನು ಬಿಡುಗಡೆ ಮಾಡಿದ ಸಂಸ್ಥೆಗಳಿಗೆ ಸಂಬಂಧಿಸಿದ ಮಾಹಿತಿಯನ್ನು 22 ಇಲಾಖೆಗಳು ಒದಗಿಸಿಲ್ಲ.

ವೈಯಕ್ತಿಕ ಠೇವಣಿ (ಪಿಡಿ) ಲೆಕ್ಕಗಳಲ್ಲಿ ದೊಡ್ಡ ಮೊತ್ತದ ಶಿಲ್ಕನ್ನು ಉಳಿಸಿಕೊಳ್ಳುವುದು, ಚಾಲ್ತಿಯಲ್ಲಿಲ್ಲದ ಪಿಡಿ ಖಾತೆಗಳ ಲೆಕ್ಕ ಸಮನ್ವಯ ಮಾಡಿ ಮುಕ್ತಾಯಗೊಳಿಸದಿರುವುದು, ಮತ್ತು ವೆಚ್ಚವಾಗದೆ ಉಳಿದಿರುವ ಶಿಲ್ಕುಗಳನ್ನು ಸಂಚಿತ ನಿಧಿಗೆ ವರ್ಗಾಯಿಸದಿರುವುದು ಶಾಸಕಾಂಗದ ಹಣಕಾಸು ನಿಯಂತ್ರಣ ತತ್ವಗಳಿಗೆ ವಿರುದ್ಧವಾಗಿದೆ. ಪಿಡಿ ಖಾತೆಗಳಲ್ಲಿನ ಅಂತಿಮ ಶಿಲ್ಕುಗಳು ಹದಿಮೂರು ಮತ್ತು ಹದಿನಾಲ್ಕನೆಯ ಹಣಕಾಸು ಆಯೋಗಗಳ ಅನುದಾನಗಳಲ್ಲಿ ಬಳಕೆಯಾಗದೆ ಉಳಿದಿರುವ ಮೊತ್ತಗಳನ್ನು ಒಳಗೊಂಡಿತ್ತು. ಇದು ಪಿಡಿ ಖಾತೆಗಳನ್ನು ವೆಚ್ಚವಾಗದೆ ಉಳಿದ ಎಲ್ಲಾ ಮೊತ್ತಗಳನ್ನು ನಿಲುಗಡೆಮಾಡಲು ಬಳಸಲಾಗಿದೆ ಎಂದು ಸೂಚಿಸುತ್ತದೆ.

(ಅಧ್ಯಾಯ – 4)